**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 69/2018**

ಚಾಸಾ-06, ಫ್ರಾ.ಸಾ-04

| | | |
|---|---|---|
| ಹೆಸರು | : | ಡಾ: ಗೋವಿಂದಶೆಟ್ಟಿ |
| ತಂದೆಯ ಹೆಸರು | : | ಲೇಟ್ ಏಲಕ್ಕಿಶೆಟ್ಟಿ |
| ವಯಸ್ಸು | : | 64 |
| ವೃತ್ತಿ | : | ನಿವೃತ್ತ ವೈದ್ಯಾಧಿಕಾರಿ. |
| ವಾಸ | : | ಮೈಸೂರು |

**ದಿನಾಂಕ 24.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ತಿ. ನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೆಪ್ಟೆಂಬರ್ 2009 ರಿಂದ ಮೇ 2020 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 05.05.2017 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಫ್ರಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ನನ್ನ ಬಳಿ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಅವರ ಹಣೆಯ ಬಲಭಾಗದಲ್ಲಿ 3x2 ಸೆ.ಮೀ. ಅಳತೆಯ ಊತ, ಅವರ ಬಲ ತೋಳಿನ ಮೇಲೆ 3x1 ಸೆ.ಮೀ. ಅಳತೆಯ ತರಚಿದ ಗಾಯ ಮತ್ತು ಎಡ ದವಡೆಯಲ್ಲಿ 3x1 ಸೆ.ಮೀ. ಅಳತೆಯ ಊತ ಇರುವುದು ಕಂಡು ಬಂತು. ಫ್ರಾಸಾ-1 ರವರಿಗೆ ಆಗಿದ್ದ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದು ಕಂಡು ಬಂದವು.

ಫ್ರಾಸಾ-1 ರವರಿಗೆ ಚಿಕಿತ್ಸೆ ನೀಡಿರುತ್ತೇನೆ. ಆ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು

**ಸಿಸಿ ಸಂಖ್ಯೆ: 69/2018**

ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.7 ಮತ್ತು 7(ಎ) ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಿದ ಗಾಯಗಳು ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹೊಡೆದರೆ ಆಗಬಹುದು. ಈ ದಿನ ನ್ಯಾಯಾಲಯದಲ್ಲಿರುವ ದೊಣ್ಣೆಯಿಂದ ಹೊಡೆದಿದ್ದರೆ ಆ ಗಾಯಗಳು ಆಗಬಹುದು.

**ಪಾಟೀ ಸವಾಲುಃ ಶ್ರೀ ಹೆಚ್.ಎನ್.ಬಿ.ಎನ್. ಆರೋಪಿತರ ಪರ ವಕೀಲರಿಂದ**

ಫ್ರಾಸಾ-1 ರವರು ಒಬ್ಬರೇ ಆಸ್ಪತ್ರೆಗೆ ಬಂದಿದ್ದರು. ನಿಪಿ.7 ರಲ್ಲಿ ಗಾಯದ ಅವಧಿಯನ್ನು ನಮೂದಿಸಿಲ್ಲ. ಅದರಲ್ಲಿ ಕುಡುಗೋಲಿನಿಂದ ಫ್ರಾಸಾ-1 ರವರಿಗೆ ಹಲ್ಲೆ ಮಾಡಲಾಗಿದೆ ಎಂದು ಹೇಳಲಾಗಿದೆ. ಒಬ್ಬ ವ್ಯಕ್ತಿಯು ಗಟ್ಟಿಯಾದ ನೆಲದ ಮೇಲೆ ಬಿದ್ದಾಗ ಈ ಮೇಲೆ ಹೇಳಿದ ಗಾಯಗಳು ಆಗಬಹುದು ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ. ನರಸೀಪುರ**